# ಸರ್ಕಾರಿ ಪ್ರೌಢಶಾಲೆ ಅಂಗೊಂಡಹಳ್ಳಿ ಮುಳಬಾಗಿಲು ತಾಲ್ಲೂಕು ಕೋಲಾರ ಜಿಲ್ಲೆ

(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೋಲಾರ ಜಿಲ್ಲೆ)

**ಅರ್ಧವಾರ್ಷಿಕ ಪರೀಕ್ಷೆ - 2022-23**

**ತರಗತಿ : 10** **ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು : 100** **ಸಮಯ : 3.15 ನಿ**

## ಉತ್ತರ ಕೀಲಿ

**I. ಕೆಳಗಿನ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಕ್ರಮಾಂಕ ಸಹಿತ ಉತ್ತರ ಬರೆಯಿರಿ.** **6X1=6**

1. ಭೂಮಿಜಾತೆ ಪದದಲ್ಲಿರುವ ಅನುನಾಸಿಕಾಕ್ಷರ;

   ಬಿ) ಮಿ

2. ಗುಣಸಂಧಿಗೆ ಉದಾಹರಣೆಯಾದ ಪದವಿದು;

   ಸಿ) ಸೂರ್ಯೋದಯ

3. ಜಾಡ್ಯ ಪದದ ಸಮಾನಾರ್ಥಕ ಪದವಿದು;

   ಡಿ) ರೋಗ

4. ಕಾರವಾರದಲ್ಲಿ ಮಲೇರಿಯಾ ರೋಗ ವ್ಯಾಪಕವಾಗಿ ಹಬ್ಬಿತ್ತು;

   ಎ) ಸಾಮಾನ್ಯ

5. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

   ಸಿ) ವಿವರಣಾತ್ಮಕ

6. ದ್ವಿತೀಯ ವಿಭಕ್ತಿಯ ಕಾರಕಾರ್ಥವಿದು;

   ಡಿ) ಕರ್ಮಾರ್ಥ

**II. ಮೊದಲೆರೆಡು ಪದಗಳ ಸಂಬಂಧದಂತೆ ಮೂರನೇ ಪದದ ಸಂಬಂಧ ಪದ ಬರೆಯಿರಿ:** **4X1=4**

7. ಕ್ರಿಯಾರ್ಥಕಾವ್ಯಯ
8. ಬಹುವ್ರೀಹಿ ಸಮಾಸ
9. ಜೋಡುನುಡಿ
10. ವಿಶ್ವಾಸ

**III. ಕೆಳಗಿನ ಪ್ರಶ್ನೆಗಳಿಗೆ ಪೂರ್ಣ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7X1=7**

**11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
ಮತಂಗಾಶ್ರಮದಲ್ಲಿ ವಾಸವಾಗಿದ್ದ ತಪಸ್ವಿನಿ ಶಬರಿ.

**12. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ಎಂದು ಕವಿ ಹೇಳಿದ್ದಾರೆ?**
ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು ಎಂದು ಕವಿ ಹೇಳಿದ್ದಾರೆ

**13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?**
'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿ ಆಂಗ್ಲರ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ.

**14 ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**
'ಹಲಗಲಿ ಬಂಟರ ಹತಾರ ಕದನ' ಘಟನೆಯು ಹಲಗಲಿ ಲಾವಣಿಗೆ ಕಾರಣವಾಗಿದೆ.

**15. ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?**
ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.

**16. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?**
ಹಿತವಚನವು ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ಮನಸ್ಸಿನ ಕೊಳೆಯನ್ನೆಲ್ಲ ತೊಳೆದುಬಿಡುತ್ತದೆ.

**17. ಸಾಮಾಜಿಕ ಕಾನೂನಗಳ ಹರಿಕಾರ ಎಂದು ಹೆಸರಾಗಿದ್ದವರು ಯಾರು ?**
ನಾಲ್ವಡಿ ಕೃಷ್ಣರಾಜ ಒಡೆಯರು ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾಗಿದ್ದರು.

**IV. ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯದಲ್ಲಿ ಉತ್ತರಿಸಿ.** **10X2=20**

**18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾದಳು. ನಂತರ ರಾಮನ ಬಳಿ ಬಂದು ಅವನ ಮೈಯನ್ನು ಮುಟ್ಟಿ ಪಾದಕ್ಕೆ ನಮಸ್ಕರಿಸಿ ಅವನ ಕೈಯನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು. ಪ್ರೀತಿಯಿಂದ ಕಟ್ಟಿದ ಹೂ ಮಾಲೆಯನ್ನು ಅವನ ಕೊರಳಿಗೆ ಹಾಕಿ ತಾನು ತಂದ ಹಣ್ಣನ್ನು ನೀಡುತ್ತಾ ಜಗತ್ತಿನಲ್ಲಿ ಇದರಷ್ಟು ರುಚಿಯಾದ ಹಣ್ಣು ಯಾವುದೂ ಇಲ್ಲ, ಎಂದು ಹೇಳಿ ಧನ್ಯಭಾವದಿಂದ ಆನಂದಿಸಿದಳು.

**19. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?**

ಹಣ ಮತ್ತು ಸಂಪತ್ತಿನಷ್ಟು ಕೆಟ್ಟ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ, ಏಕೆಂದರೆ ಅದಕ್ಕೆ ಯಾರ ಗುರುತೂ ಇಲ್ಲ. ಸಂಪತ್ತು ಸಿಕ್ಕಿತು ಎಂದ ಮಾತ್ರಕೆ ಸುಖವುಂಟೆ? ಅದನ್ನು ಕಾಯುವ ಕಷ್ಟ ಕಾಪಾಡುವ ಪಾಡು ಯಾರಿಗೆ ಬೇಕು. ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥಹ ಗುಣ ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟು ಸಂಪತ್ತು ತಂತಾನೆ ಕಣ್ಮರೆಯಾಗಿ ಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲಾ ಕತ್ತಲೆ ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ.

**20. ಶಬರಿಯು ರಾಮನಿಂದ ಮೋಕ್ಷ ಬಯಸಿದ ರೀತಿ ತಿಳಿಸಿ.**

ಕೋಟಿ ಕಿರಣಗಳಿಂದ ರವಿ ಎತ್ತಿರುವ ನೀಲಾಕಾಶದ ಹೊರಗೆ ನನ್ನ ಗಮನ ಅಜ್ಞಾನದ ಮಾಯೆಯಾಚೆ ಪಯಣ ಅದಕ್ಕಾಗಿ ಹಕ್ಕಿಯಂತೆ ಹಾರದೆ ಬಿಳಿಮುಗಿಲಂತೆ ತೇಲದೆ ಕಪ್ಪು ಮೋಡದಲ್ಲಿ ಕಾಣುವ ಸೆಳೆ ಮಿಂಚಿನಂತೆ ಈ ಜನ್ಮ ಬಿಡುವ ಬಯಕೆ ನನಗೆ ಈ ರೀತಿಯ ಮೋಕ್ಷವನ್ನು ಬಯಸಿದಳು.

**21. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು.

**22. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ 2. ವೈದ್ಯ ಸಹಾಯ 3. ವಿದ್ಯಾ ಪ್ರಚಾರ 4. ನೀರಿನ ಸೌಕರ್ಯ 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

**23. ಕ್ರಿಯಾ ಸ್ವಾತಂತ್ರ್ಯದ ಬಗ್ಗೆ ಅಂಬೇಡ್ಕರ್ ರವರ ಚಿಂತನೆಗಳೇನು ? ತಿಳಿಸಿ**

ಕ್ರಿಯಾ ಸ್ವಾತಂತ್ರ್ಯವೆಂದರೆ ತನಗೆ ಇಷ್ಟ ಬಂದ ಕೆಲಸವನ್ನು ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಶೋಷಣೆ ಎಲ್ಲಿ ಇಲ್ಲವಾಗಿದೆಯೋ, ಒಂದು ವರ್ಗವು ಇನ್ನೊಂದು ವರ್ಗವನ್ನು ತುಳಿಯುತ್ತಿಲ್ಲವೋ, ಎಲ್ಲಿ ನಿರುದ್ಯೋಗವಿಲ್ಲವೊ, ಬಡತನವಿಲ್ಲವೊ, ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಬೀತಿ ವ್ಯಕ್ತಿಗೆ ಇರುವುದಿಲ್ಲವೊ, ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯವಿದೆ ಎಂಬುದು ಅಂಬೇಡ್ಕರ್ ರವರ ಚಿಂತನೆಗಳಾಗಿದ್ದವು.

**24. ಬ್ರಿಟಿಷರ್ ಹಲಗಲಿಯಲ್ಲಿ ಲೂಟಿ ಮಾಡಿದ ವಸ್ತುಗಳಾವುವು?**

ದಂಡು ಹಲಗಲಿಯ ಮೇಲೆ ದಾಳಿ ನಡೆಸಿದರು ಇದರ ಪರಿಣಾಮವಾಗಿ ಕೊಡಲಿ, ಕೋರೆ, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಶಿನ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲಾ, ಗಂಗಳ ಚೆರಗಿ, ಮಂಗಳ ಸೂತ್ರ ಮತ್ತು ಬೀಸುಕಲ್ಲು ಮುಂತಾದ ಎಲ್ಲಾ ವಸ್ತುಗಳನ್ನು ಲೂಟಿ ಮಾಡಿದರು.

**25. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

ಗಾಂಧೀಜಿಯವರು ಇಂಗ್ಲೆಂಡ್‌ಗೆ ಹೋಗುವವರೆಗೂ ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ ಶಿಕ್ಷಣದ ಅವಶ್ಯಕ ಅಂಶವಲ್ಲವೆಂದು ಭಾವಿಸಿದ್ದರು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆ ನೋಡಿ ಅವರಿಗೆ ನಾಚಿಕೆಯೂ, ಪಶ್ಚಾತ್ತಾಪವೂ ಆಯಿತು. ಕೆಟ್ಟ ಅಕ್ಷರದ ಬರವಣಿಗೆ ಅಪೂರ್ವ ಶಿಕ್ಷಣದ ಚಿಹ್ನೆ ಎಂದು ಅರಿತರು. ತನ್ನ ಬರವಣಿಗೆಯನ್ನು ತಿದ್ದಿಕೊಳ್ಳಲು ಬಯಸಿದರಾದರೂ ಸುಟ್ಟ

ಮಡಕೆಗೆ ಹಸಿ ಮಣ್ಣನ್ನು ಮೆತ್ತಲು ಸಾಧ್ಯವಿಲ್ಲದ ಹಾಗೆ, ಆ ವೇಳೆಗೆ ಕಾಲ ಮೀರಿ ಹೋಗಿತ್ತು. ಅವರು ಉದಾಹರಣೆಯಿಂದ ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕ ಯುವತಿಯರು ತಿಳಿದುಕೊಳ್ಳಲಿ ಎಂದು ಅವರು ಹೇಳಿದ್ದಾರೆ.

**26. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**

ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು, ಅದಕ್ಕೆ ಪರ್ಯಾಯವಾದ ದ್ರಾವಿಡ ಚಳುವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳುವಳಿಯನ್ನು ರೂಪಿಸಿದರು. ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು, ಜಾತಿ, ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿ ಹಿಡಿದರು. ಬ್ರಾಹ್ಮಣೇತರ ಚಳುವಳಿಯನ್ನು ಸಾಂಸ್ಕೃತಿಕ ಚಳುವಳಿಯನ್ನಾಗಿ ಪರಿವರ್ತಿಸಿದರು, ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ ಜಾತಿ, ಲಿಂಗ, ಅಸಮಾನತೆಗಳಿಂದ ಹೊರ ಬಂದು ಸರ್ವಧರ್ಮ ಸಹಿಷ್ಣುತೆಯ ಸಮಾಜ ರೂಪಗೊಳ್ಳಬೇಕು ಎಂಬುದು ಅವರ ಬದುಕಿನ ಧ್ಯೇಯವಾಗಿತ್ತು.

**27. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?**

ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ : "ಏಪ್ರಿಲ್–13, 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ." ಎಂಬುದಾಗಿತ್ತು.

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ, ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2X3=6**

**28. ಲೇಖಕರ ಪರಿಚಯ – ವಿ.ಕೃ.ಗೋಕಾಕ್**

ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರು ಕ್ರಿ.ಶ.1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ವಿ.ಕೃ.ಗೋಕಾಕ ಅವರು ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್, ಡಿ.ಲಿಟ್. ಪದವಿ ಲಭಿಸಿವೆ. ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ.

**29. ಕವಿ ಪರಿಚಯ : ಕುಮಾರವ್ಯಾಸ**

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪನು ಕ್ರಿ.ಶ.1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು. ಆದಿಕವಿ ಪಂಪನ ಅನಂತರ ವ್ಯಾಸರ ಮಹಾಭಾರತದ ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ರಚಿಸಿ ಪಂಡಿತರಿಗೆ ಮಾತ್ರವಲ್ಲದೇ, ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಪಾತ್ರನಾದ ಕುಮಾರವ್ಯಾಸ. ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ ಐರಾವತ ಎಂಬ ಕೃತಿಯನ್ನೂ ರಚಿಸಿದ್ದಾನೆಂದು ತಿಳಿದುಬಂದಿದೆ. ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ **"ರೂಪಕ ಸಾಮ್ರಾಜ್ಯ ಚಕ್ರವರ್ತಿ"** ಎಂಬ ಬಿರುದಿಗೆ ಪಾತ್ರನಾಗಿದ್ದಾನೆ.

**VI.** ಈ ಪದ್ಯಭಾಗವನ್ನು ಬರೆದುಕೊಂಡು ಪ್ರಸ್ತಾರ ಹಾಕಿ, ಗಣ ವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ :– **1X3=3**

30.

| | | | | | | |
|---|---|---|---|---|---|---|
| 3<br>U U U<br>ಲಲನೆ | 4<br>U U -<br>ಪಡೆದೀ | 3<br>- U<br>ಯೈದು | 4<br>- -<br>ಮಂತ್ರಂ | = 14 | | |
| 3<br>UUU<br>ಗಳಲಿ | 4<br>U UUU<br>ಮೊದಲಿಗ | 3<br>- U<br>ನೀನು | 4<br>-U U<br>ನಿನ್ನಯ | = 14 | | |
| 3<br>UU U<br>ಬಳಿಯು | 4<br>- U U<br>ಧಿಷ್ಠಿರ | 3<br>- U<br>ದೇವ | 4<br>- U U<br>ಮೂರನೆ | 3<br>- U<br>ಯಾತ | 4 +<br>UU -<br>ಕಲಿಭೀ | 2 = 23<br>-<br>ಮ |

**ಛಂದಸ್ಸಿನ ಹೆಸರು : ಇದು ಮಾತ್ರಾಗಣ ಛಂದಸ್ಸಿನ ಭಾಮಿನಿ ಷಟ್ಪದಿಗೆ ಸೇರಿದೆ.**

**VII.** ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಹೆಸರಿಸಿ. ಲಕ್ಷಣ ಬರೆದು ಸಮನ್ವಯ ಮಾಡಿ ಬರೆಯಿರಿ.

**31. 'ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದಾಂಗ'**

**ಅಲಂಕಾರ : ಉಪಮಾಲಂಕಾರ**

**ಲಕ್ಷಣ :-** ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನ) ಪರಸ್ಪರ ಹೋಲಿಕೆಯನ್ನು **ಉಪಮಾಲಂಕಾರ** ಎನ್ನುವರು.

**ಉಪಮೇಯ** : ಒಳಗಿನ ಮಂದಿ ಸಿಡಿಯುವುದು

**ಉಪಮಾನ** : ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

**ಉಪಮಾಚಕ** : ಹಾಂಗ

**ಸಮಾನಧರ್ಮ** : ಸಿಡಿಯುವುದು

**ಸಮನ್ವಯ** : ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಹೋಲಿಸಲಾಗಿದೆ. ಹಾಂಗ ಎಂಬುದು ಉಪಮಾಚಾಚಕವಾಗಿದ್ದು, ಸಿಡಿಯುವುದು ಸಮಾನಧರ್ಮವಾಗಿದೆ.

**VIII.** ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒದನ್ನು ಆ ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.

**32. ಕೂಡಿ ಬಾಳಿದರೆ ಸ್ವರ್ಗಸುಖ** **1X3=3**

**ಅಥವಾ**

**ತಾಳಿದವನು ಬಾಳಿಯಾನು.**

| | |
|---|---|
| ಗಾದೆಯ ಮಹತ್ವದ ವಿವರಣೆ | 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| ಒಟ್ಟು | 3 ಅಂಕಗಳು |

**IX.** ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. **6X3=18**

**33. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**

**ಆಯ್ಕೆ :-** ಈ ವಾಕ್ಯವನ್ನು ಪು.ತಿ ನರಸಿಂಹಾಚಾರ್ ಅವರು ರಚಿಸಿರುವ ಶಬರಿ ಗೀತನಾಟಕದಿಂದ ಆಯ್ದ ಶಬರಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :-** ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತಾ ಹಂಬಲಿಸುತ್ತಿರುವ ವೃದ್ದೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :-** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು; ಎಂದು ಹೇಳುವುದುಸ್ವಾರಸ್ಯವಾಗಿದೆ.

**34. "ದುಡ್ಡು ದುರಭಿಮಾನದ ತವರು"**

**ಆಯ್ಕೆ :-** ಮೇಲಿನ ವಾಕ್ಯವನ್ನು "ವಿದ್ಯಾವಾಚಸ್ಪತಿ ಡಾ॥ ಬನ್ನಂಜೆ ಗೋವಿಂದಾಚಾರ್ಯ" - ಇವರು ಬರೆದ "ಕಾದಂಬರಿ" ಕೃತಿಯಿಂದ ಆರಿಸಲಾದ 'ಶುಕನಾಸನ ಉಪದೇಶ' ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :-** ಅಹಂಕಾರದ ದಾಹಜ್ವರ ತಲೆಗೇರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು, ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷ ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ, ಎಂದು ವಿವರಿಸುವಾಗ ಈ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :-** ದುಡ್ಡಿನ ಮದ ಏರಿದವರಿಗೆಲ್ಲ ದುರಹಂಕಾರ, ದುರಭಿಮಾನಗಳು ಸೇರಿ ಅದರ ಮುಂದೆ ಉಳಿದೆಲ್ಲವೂ ಗೌಣವಾಗುತ್ತದೆ ಎನ್ನುವುದು ಈ ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

35. **"ಕೈಗಾರಿಕೀಕರಣ ಇಲ್ಲವೆ ಅವನತಿ"**

**ಆಯ್ಕೆ :-** ಈ ವಾಕ್ಯವನ್ನು ಶ್ರೀ ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :-** ವಿಶ್ವೇಶ್ವರಯ್ಯನವರು ಬಡತನ ನಿರ್ಮೂಲನೆ ಮಾಡಿ, ಆರ್ಥಿಕ ಅಭಿವೃದ್ಧಿಗೆ ಬುನಾದಿ ಹಾಕಲು ಕೈಗಾರಿಕೆಗಳಿಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು.

**ಸ್ವಾರಸ್ಯ :-** ಕೈಗಾರಿಕೆಗಳಿಗೆ ಉತ್ತೇಜನ, ಬಡತನದ ನಿರ್ಮೂಲನ ಎಂಬಂತೆ ವಿಶ್ವೇಶ್ವರಯ್ಯನವರ ಆರ್ಥಿಕಾಭಿವೃದ್ಧಿಯ ದೂರದೃಷ್ಟಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

36. **"ನಾಳಿನ ಕನಸನು ಬಿತ್ತೋಣ."**

**ಆಯ್ಕೆ :-** ಈ ವಾಕ್ಯವನ್ನು ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪ ಅವರು ರಚಿಸಿರುವ **"ಎದೆತುಂಬಿ ಹಾಡಿದೆನು"** ಕವನ ಸಂಕಲನದಿಂದ ಆಯ್ದ **"ಸಂಕಲ್ಪಗೀತೆ"** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :-** ಕವಿಗಳು "ಭಯ ಸಂಶಯಗಳು ಆವರಿಸಿಕೊಂಡಿರುವ ಇಂದಿನ ಜಗತ್ತಿನಲ್ಲಿ ಭವಿಷ್ಯದ ಕನಸನ್ನು ಬಿತ್ತಬೇಕಾಗಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :-** "ಭಯ ಸಂಶಯಗಳನ್ನು ದೂರವಾಗಿಸಿ ಭವಿಷ್ಯದ ಆಶಾಭಾವನೆ ನೆಲೆಸುವಂತೆ ಮಾಡಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

37. **"ಸಾರ್ವಭೌಮರಾ ನೆತ್ತಿಯ ಕುಕ್ಕಿ"**

**ಆಯ್ಕೆ :-** ಈ ವಾಕ್ಯವನ್ನು **"ಅಂಬಿಕಾತನಯದತ್ತ"** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ. ರಾ. ಬೇಂದ್ರೆ ಅವರು ರಚಿಸಿರುವ **"ಗರಿ"** ಕವನ ಸಂಕಲನದಿಂದ ಆಯ್ದ **"ಹಕ್ಕಿ ಹಾರುತಿದೆ ನೋಡಿದಿರಾ"** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :-** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :-** ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

38. **"ಮೋಸ ಮಾಡಿ ನಮ್ಮ ದೇಶ ಗೆದಿತಾರೊ"**

**ಆಯ್ಕೆ :-** ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ **"ಕನ್ನಡ ಜನಪದ ಗೀತೆಗಳು"** ಕೃತಿಯಿಂದ ಆಯ್ದ **"ಹಲಗಲಿಯ ಬೇಡರು"** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :-** ಬ್ರಿಟಿಷರು ನಿಶ್ಶಸ್ತ್ರೀಕರಣದ ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ನಾಲ್ವರು ಭಂಟರು ಆಯುಧಗಳನ್ನು ಕೊಡಲು ಒಪ್ಪದಿರುವಾಗ ಬ್ರಿಟೀಷರ ಮುಂದಿನ ಪಿತೂರಿಯನ್ನು ಅರಿತ ಜಡಗ ಈ ಮೇಲಿನಂತೆ ಹೇಳುತ್ತಾನೆ.

**ಸ್ವಾರಸ್ಯ :-** ಹಲಗಲಿಯ ಬೇಡರು ತಮ್ಮ ಪ್ರಾಣಕ್ಕಿಂತ ನಾಡನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು ಎಂಬ ಮಾತು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**X.** ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. **1X4=4**

39. ನೀಲಮೇಘಮಂಡಲ-ಸಮ ಬಣ್ಣ

ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸಿಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1X4=4**

**40.** ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**ಆಯ್ಕೆ :-** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪನು ರಚಿಸಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಮಹಾಕಾವ್ಯದಿಂದ ಆಯ್ದ "ಕೌರವೇಂದ್ರನ ಕೊಂದೆ ನೀನು" ಎಂಬ ಪದ್ಯಭಾಗದಿಂದಆರಿಸಲಾಗಿದೆ.

**ಸಾರಾಂಶ :-** ಕೃಷ್ಣನು ಕರ್ಣನನ್ನು ಕುರಿತು ನಿನಗೆ ಹಸ್ತಿನಾಪುರದ ರಾಜ್ಯದ ಹಿರಿಮೆಯನ್ನು ಮಾಡುವೆನು. ಪಾಂಡವ ಕೌರವ ರಾಜರು ಗದ್ದುಗೆಯ ಒಲೈಸುವರು. ನಿನಗೆ ಎರಡು ಸಂತತಿ ಮರುಮಾತಾಡದೆ ಸೇವೆಯನ್ನು ಮಾಡುವರು. ಹೀಗಿರುವಾಗ ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ ಹೇಳು ಎಂದನು.

**XII. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯದಲ್ಲಿ ಉತ್ತರಿಸಿ. 2X4=8**

**41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?**

ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿನ ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಸಂಚರಿಸುತ್ತವೆ. ವೂಲವರ್ಥ ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ, ಇಲ್ಲಿ ಎಲ್ಲ ತರದ ಸಾಮಾಗ್ರಿಗಳು ದೊರಕುತ್ತವೆ. ಲಂಡನ್ ನಗರದ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳೇ ಕಾರ್ಯ ನಿರ್ವಹಿಸುತ್ತಾರೆ. ಚೇರಿಂಗ್ ಕ್ರಾಸ್ ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ. ಟ್ರಾಫಲ್ಗಾರ್ ಸ್ಕ್ವೇರ್ ನಲ್ಲಿ ನೆಲ್ಸನ್‌ರವರ ಮೂರ್ತಿಯಿದೆ. ಇಲ್ಲಿ ಹೆಣ್ಣು ಮಕ್ಕಳ ಟೊಪ್ಪಿಗೆಯು ವೈವಿಧ್ಯಮಯವಾಗಿರುತ್ತದೆ. ವೆಸ್ಟಮಿನಿಸ್ಟರ್ ಅಬೆ ಎಂಬುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನ ಪ್ರಾರ್ಥನಾ ಮಂದಿರವಾಗಿದೆ. ಇದನ್ನು ಸತ್ತವರ ಸ್ಮಾರಕವಾಗಿದೆ ಎಂದು ಕರೆಯುತ್ತಾರೆ. ಪೊಯೆಟ್ಸ್ ಕಾರ್ನರಿನಲ್ಲಿ ಇಂಗ್ಲೆಂಡಿನ ಪ್ರಸಿದ್ದ ಕವಿಪುಂಗವರ ಸಮಾಧಿಗಳಿವೆ. ಇದರ ಸಮೀಪದಲ್ಲೇ ಪ್ರಖ್ಯಾತ ವಿಜ್ಞಾನಿಗಳ, ವ್ಯಾಪಾರಿಗಳ, ವಾಸ್ತುಶಿಲ್ಪಿಗಳ, ಸರದಾರರ, ಸೇನಾಪತಿಗಳ ಸಮಾಧಿಗಳು ಸಹ ಇವೆ. ಲಂಡನ್ ನಗರದಲ್ಲಿ ಇರುವ ಅರಮನೆಯ ಸೌಂದರ್ಯ ಹಾಗೂ ರಾಜರುಗಳ ವೈಭವ ರಾಯಲ್‌ಚಾಪೆಲ್‌ನಲ್ಲಿ ಕಂಡುಬರುತ್ತದೆ. ಸಾಮ್ರಾಟರ ರಾಜ್ಯಾಭಿಷೇಕ ಆಗುವಾಗ ಕೂಡುವ 'ಸ್ಟೋನ್ ಆಫ್ ಸ್ಟೋನ್' ವಿಶಿಷ್ಟವಾದುದಾಗಿದೆ. ಈ ಮೇಲಿನ ಎಲ್ಲಾ ವಿಶೇಷತೆಗಳನ್ನು ಲಂಡನ್ ನಗರದ ವೀಕ್ಷಣೆಯಲ್ಲಿ ಲೇಖಕರು ಗುರುತಿಸುತ್ತಾರೆ.

**'ವೆಸ್ಟ್ ಮಿನಸ್ಟರ್ ಅಬೆ, ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.**

ಲಂಡನ್ ನಗರದಲ್ಲಿರುವ ವೆಸ್ಟ ಮಿನಿಸ್ಟರ್ ಅಬೆ ಎನ್ನುವುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರವಾಗಿದೆ. ಇದು ದಿವಂಗತರಾದ ಸಂತರು, ಸಾರ್ವಭೌಮರು, ಹಾಗೂ ಕವಿ ಪುಂಗವರ ಸ್ಮಾರಕವಾಗಿದೆ. ಆದ್ದರಿಂದ ಇದನ್ನು ಸತ್ತವರ ಸ್ಮಾರಕವೆಂದೂ ಸಹ ಕರೆಯುತ್ತಾರೆ. ಈ ಸ್ಮಾರಕವು "ಮರ್ತ್ಯತ್ವವೇ, ಎಷ್ಟು ಗೋರಿಗುಂಪುಗಳು ಇಲ್ಲಿವೆ; ನೋಡಿ ಅಂಜು" ಎಂಬ ಬ್ಯೂಮಾಂಟ್ ಕವಿಯ ಹಾಡನ್ನು ನೆನಪಿಸುತ್ತದೆ. ಗೋಲ್ಡಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು ವೆಸ್ಟಮಿನ್‌ಸ್ಟರ್ ಅಬೆಯನ್ನು ಕುರಿತು ಉತ್ತಮವಾದ ನಿಬಂಧನಗಳನ್ನು ರಚಿಸಿದ್ದಾರೆ. ಇಂದಿಗೂ ವೆಸ್ಟಮಿನ್‌ಸ್ಟರ್ ಅಬೆಯು ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿದೆ. ಈ ಕಟಡ್ಡದಲ್ಲಿ ಹೊರಗಿನಿಂದ ಶೃಂಗರಿಸಿ ಸಣ್ಣ ಬಾಗಿಲೊಂದು ಕಾಣುತ್ತದೆ. ಒಳಗೆ ಮಾತ್ರ ಭವ್ಯವಾಗಿದೆ. ಇಲ್ಲಿ ಪಾದ್ರಿಗಳು ಸತ್ತವರಿಗಾಗಿ ಪ್ರಾರ್ಥನೆ ಮಾಡುತ್ತಾರೆ. ಬಹುಜನರು ಪ್ರಾರ್ಥನೆಗಿಂತ ಪ್ರಾರ್ಥನಾ ಮಂದಿರವನ್ನು ನೋಡಲು ಬರುತ್ತಾರೆ. ನಡುವೆ ಇರುವ ಸಣ್ಣ ಹಾದಿಯ ಎಡಬಲಕ್ಕೆ ರಾಜಕಾರಣ, ಚತುರರ ಶಿಲಾಮೂರ್ತಿಗಳಿವೆ. ರಾಜರಿಗಿಂತ ಕವಿಗಳಿಗಿಂತ ಇವರೇ ಆಂಗ್ಲರ ಕೀರ್ತಿಧ್ವಜವನ್ನು

ನಿಲ್ಲಿಸಿದರೆಂಬುದು ಇಲ್ಲಿಯವರ ಅಭಿಪ್ರಾಯವಾಗಿದೆ. ಈ ಬಂಗಾರದ ಬಣ್ಣದಿಂದ ಲೇಪಿತವಾದ ಶಿಲಾ ಮೂರ್ತಿಗಳು ಹಾಗೂ ಉತ್ತಮವಾದ ಕೆತ್ತನೆಯು ಸಂದರ್ಶಕರ ಮನಸನ್ನು ಸೆಳೆಯುತ್ತವೆ.

**42. ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುವುದು ಕವಿ ಶಿರುದ್ರಪ್ಪನವರ ಆಶಯ ?**

"ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ , ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲಿ ಮುನ್ನಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದಿಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರಪ್ರೇಮಿಯಾಗುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಂವೃದ್ಧವಾಗುವಂತಹ ವಸಂತಕಾಲವಾಗುವ. ಅತ್ಯಾಚಾರ,ಅನಾಚಾರ, ಭ್ರಷ್ಟಾಚಾರ, ಅಸ್ಪೃಷ್ಯತೆ, ಅಸಮಾನತೆಯಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ ಭಾಷೆ, ಜಾತಿ, ಮತ, ಧರ್ಮಗಳ ಪ್ರಭಾವದಿಂದ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಿ, ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ. ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸನು ಕಾಣುವಂತೆ ಮಾಡುವ ದೃಢ ಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದು ಕವಿ ಜಿ. ಎಸ್ ಶಿವರುದ್ರಪ್ಪ ಅವರ ಆಶಯವಾಗಿದೆ

**ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

ನಾವು ಜೀವನದಲ್ಲಿ ಪ್ರೀತಿಯ ದ್ವೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಕೈಗೊಳ್ಳುವುದರಿಂದ ನದೀ ಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಂಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆ ಮನೋಭವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡವಬಹುದು. ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4(2+2)**

**43. ಅ. ಆಲೂರು ವೆಂಕಟರಾಯರು ಸ್ವದೇಶಿ ಚಳುವಳಿಯ ಮೂಲಕ ಹೇಗೆ ಮಾದರಿ ಎನಿಸಿದರು ?**

ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸು ಮಾಡಲು ಹೋರಾಟ ನಡೆಸುತ್ತಾ ಸ್ವತಂತ್ರ್ಯ ಭಾರದತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರಿದವು. ಇದನ್ನು ಪ್ರತಿಭಟಿಸಲು ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ಧುಮುಕಿ ತಾವೇ ಸ್ವತಃ ಕಾರ್ಖಾನೆಗಳನ್ನು ಸ್ಥಾಪಿಸುವುದರ ಮೂಲಕ ಸ್ವದೇಶಿ ಚಳುವಳಿಯ ಮೂಲಕ ಮಾದರಿಯಾದರು.

**ಆ. ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯ ಸ್ಥಾಪಿಸಲು ಕಾರಣವೇನು ?**

ಮಕ್ಕಳ ವ್ಯಕ್ತಿತ್ವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಸ್ವದೇಶವನ್ನೂ, ಸ್ವದೇಶದ ಸಂಸ್ಕೃತಿಯನ್ನು ದೂರಮಾಡುವಂತಿತ್ತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ಮತ್ತು ನಮ್ಮ ನಮ್ಮ ಸಂಸ್ಕೃತಿಯನ್ನು ಪೋಷಿಸುವ "ರಾಷ್ಟ್ರೀಯ ಶಿಕ್ಷಣ ಚಳುವಳಿಯು" ಆಗಾಗಲೇ ಭಾರತದಲ್ಲೆಲ್ಲಾ ಆವರಿಸಿತ್ತು. ವೆಂಕಟರಾಯರು ಈ ಚಳುವಳಿಯಲ್ಲೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವಾಯಿತು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=5**

**44. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿನುತ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ರಾಷ್ಟ್ರೀಯ ಪೋಷಣಾ ಮಾಸಾಚರಣೆಯನ್ನು ಕುರಿತು ಶಿವಮೊಗ್ಗದಲ್ಲಿರುವ ಸುಲೋಚನ ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.**

| | |
|---|---|
| ಇಂದ, ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

**ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ಚಂದು ಎಂದು ಭಾವಿಸಿಕೊಂಡು ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿರುವುದರಿಂದ ಹಾನಿಯಾಗಿರುವ ರಸ್ತೆಗಳನ್ನು ಸರಿಪಡಿಸುವಂತೆ ಕೋರಿ ಮಾನ್ಯ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.**

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

**XV. ಕೆಳಗಿನ ಯಾವುದಾದರೂ ಒಂದಕ್ಕೆ ವಿಷಯಗಳಲ್ಲಿ ಹದಿನೈದು ವಾಕ್ಯದಲ್ಲಿ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 11X5=5**

**45. ರಾಷ್ಟ್ರೀಯ ಹಬ್ಬ ಗಳ ಮಹತ್ವ.**

**ಅಥವಾ**

**ಅತಿವೃಷ್ಟಿಯಿದ ಆಗುವ ಅನಾಹುತಗಳು**

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| ಭಾಷಾಶೈಲಿಗೆ, ಪದಬಂಧ | 1 ಅಂಕ |
| ಒಟ್ಟು | 5 ಅಂಕಗಳು |

*** ** * ** * ** ಧನ್ಯವಾದಗಳು * ** * ** * ****

**ಆನಂದ್ ಗುರು**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ಅಂಗೊಂಡಹಳ್ಳಿ
ಮುಳಬಾಗಿಲು ತಾಲ್ಲೂಕು ಕೋಲಾರ ಜಿಲ್ಲೆ

* ** * ** * ** * ** * ** * *** ** * ** * **